KUVEMPU UNIVERSITY
THE SOCIAL SCIENCE DIALOGUE
Peer Reviewed Open Access Journal
Prasaranga, Kuvempu University

# ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬುಡಕಟ್ಟು ಸಮುದಾಯಗಳ ಹೋರಾಟದ ಕಥನ

**ಡಾ. ಸಂತೋಷ್ ನಾಯಕ್ ಆರ್**
ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು 570006.

***ಸಾರಾಂಶ***

*ಭಾರತದಲ್ಲಿನ ಸುಮಾರು 700ಕ್ಕೂ ಹೆಚ್ಚಿನ ಬುಡಕಟ್ಟು ಸಮುದಾಯಗಳು ತಮ್ಮ ವಿಶಿಷ್ಟವಾದ ಕಲೆ, ನೃತ್ಯ, ಸಂಗೀತ, ಆಹಾರ, ಕೃಷಿ ಮತ್ತು ಕರಕುಶಲತೆಯ ಮೂಲಕ ದೇಶದ ಸಾಂಸ್ಕೃತಿಕ ಮತ್ತು ಜ್ಞಾನ ಪರಂಪರೆಯನ್ನು ಶ್ರೀಮಂತಗೊಳಿಸಿವೆ. ಹಾಗೆಯೇ ಬುಡಕಟ್ಟುಗಳ ಸಾಂಪ್ರದಾಯಿಕ ಜೀವನ ಪದ್ಧತಿ ಮತ್ತು ನಿಸರ್ಗ ಸಹಜ ಜೀವನ ಶೈಲಿಯು, ಪರಿಸರದ ರಕ್ಷಣೆ ಮತ್ತು ಸುಸ್ಥಿರ ಬದುಕಿನ ಪಾಠಗಳನ್ನು ಕಲಿಸುವುದರ ಜೊತೆಗೆ ಇಂದು ಜಗತ್ತು ಎದುರಿಸುತ್ತಿರುವ ಜಾಗತಿಕ ತಾಪಮಾನದ, ಹವಾಮಾನ ವೈಪರೀತ್ಯದ ಸವಾಲಿಗೆ ಉತ್ತರದಂತೆ ಕಾಣುತ್ತಿರುವುದು ಇದೀಗ ಜಗತ್ತಿನ ಸಂಶೋಧನಾಸಕ್ತರ ವಿಷಯವಾಗಿದೆ. ಆದರೆ ಕೇವಲ ಅರಣ್ಯಾವಲಂಬಿತ ಜೀವನ ನಡೆಸುತ್ತಾ, ದೇಶದ ರಾಜಕೀಯ ವಿದ್ಯಮಾನಗಳ ಅರಿವಿರದೆ, ಬುಡಕಟ್ಟು ಸಮುದಾಯಗಳು ಮುಖ್ಯವಾಹಿನಿಯಿಂದ ಪ್ರತ್ಯೇಕವಾಗಿದ್ದವು ಎಂದು ಭಾವಿಸಿದರೆ ಅದು ತಪ್ಪಾಗುತ್ತದೆ. ಈ ದೇಶದ ನಾಗರೀಕ ಸಮಾಜವು ಬ್ರಿಟೀಷರ ವಿರುದ್ಧ ಸ್ವಾತಂತ್ರ್ಯ ಸಂಗ್ರಾಮ ನಡೆಸುವ ಮೊದಲೇ ಬುಡಕಟ್ಟು ಸಮುದಾಯಗಳು ಬಂಡಾಯವೆದ್ದ ಕುರಿತು ಮತ್ತು ಹೋರಾಟವನ್ನು ನಡೆಸಿರುವ ಕುರಿತು ಬಹಳಷ್ಟು ಜನರಿಗೆ ತಿಳಿದಿಲ್ಲ. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬುಡಕಟ್ಟು ಸಮುದಾಯಗಳ ಪಾತ್ರವನ್ನು ದಾಖಲಿಸುವ ಪ್ರಯತ್ನ ಈ ಲೇಖನದಲ್ಲಿದೆ.*

**ಪ್ರಮುಖ ಪದಗಳು:** ಭಾರತದ ಸ್ವಾತಂತ್ರ್ಯ ಸಂಗ್ರಾಮ, ಬುಡಕಟ್ಟುಗಳು, ಬುಡಕಟ್ಟು ಸಮುದಾಯಗಳು, ಬಿರ್ಸಾ ಮುಂಡಾ, ತಿಲ್ಕಾ ಮಾಂಝಿ, ಈಸ್ಟ್ ಇಂಡಿಯಾ ಕಂಪನಿ, ಸುಸ್ಥಿರ ಬದುಕು.



Full text of this paper can be downloaded online https://www.thesocialsciencedialogue.com/archive